# ದಲಿತ ಮಹಿಳಾ ಕಾವ್ಯದಲ್ಲಿ ಜಾತಿ ಸಂಘರ್ಷದ ನೆಲೆಗಳು

**ಡಾ. ಕುಮಾರ ಇಂದ್ರಬೆಟ್ಟ**
ಕನ್ನಡ ಸಹಾಯಕ ಪ್ರಾಧ್ಯಾಪಕರು
ಬಿ. ಎಂ. ಎಸ್. ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು
ವಿ.ವಿ. ಪುರಂ, ಬೆಂಗಳೂರು.

**Article Link:** https://aksharasurya.com/2023/05/kumara-indrabetta/

ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಮನುಷ್ಯನನ್ನು ಬಹುವಾಗಿ ಕಾಡುತ್ತಿರುವುದು, ಅದಃಪತನಕ್ಕೆ ತುಳಿಯುತ್ತಿರುವುದು ಎಂದರೆ 'ಜಾತಿ' ಎಂಬ ಭೂತ. 'ಜಾತಿ'ಯು ನಮ್ಮ ಬದುಕುಗಳನ್ನು ಹಾಳುಗೆಡವುತ್ತಿದೆ. ಮನುಷ್ಯ ಮನುಷ್ಯರ ನಡುವೆ ಕಂದಕವನ್ನು ಸೃಷ್ಠಿಸುತ್ತಿದೆ. ಮನುಷ್ಯರ ನಡುವೆ ಪರಸ್ಪರ ಸಹಬಾಳ್ವೆ ನಡೆಸಬೇಕಾದ ಈ ನೆಲದಲ್ಲಿ ಶತಮಾನಗಳಿಂದಲೂ ಜಾತಿಯೆಂಬ ಶ್ರೇಣೀಕೃತ ವ್ಯವಸ್ಥೆಯೊಂದು ಕ್ರೌರ್ಯವನ್ನು ನಿರ್ಮಿಸಿದೆ. ಕುಲದ ಕಾರಣದಿಂದ ವ್ಯಕ್ತಿಯನ್ನು ಗೌರವಿಸುವ ಬದಲು ಹೀನವಾಗಿ ಕಾಣುವಂತಹ ಮನಸ್ಥಿತಿ ಕುಲದ ಕಾರಣ–ಕ್ಕಾಗಿ ನಿರ್ಮಾಣವಾದೆ. ಜಾತಿ ಪದ್ಧತಿಯ ಶ್ರೇಣೀಕೃತ ಈ ಸಮಾಜದಲ್ಲಿ ಧರ್ಮ ಸಂಪ್ರದಾಯಗಳಿಂದ ಅನೇಕ ಕಟ್ಟಳೆಗಳು ನಿರ್ಮಾಣವಾಗಿವೆ. ಹೀಗೆ ಪರಸ್ಪರರ ನಡುವೆ ಕಂದಕಗಳು ನಿರ್ಮಾಣವಾಗಲು ವೈದಿಕರು ಹೇರುವ/ ಹೇರಿರುವ ಹೇರಿಕೆ ಗಮನೀಯವಾದದ್ದು. ಈ ವೈದಿಕ ಸಂಪ್ರದಾಯವು ಭಾರತೀಯ ಸಮಾಜದಲ್ಲಿ ಚಾತುರ್ವರ್ಣ ವ್ಯವಸ್ಥೆಯು ಬೇರ್‍ಯಾವ ಧರ್ಮದಲ್ಲಿಯೂ ಕಂಡರಿಯದಂತಹ ಅನಿಷ್ಟ ವ್ಯವಸ್ಥೆಯನ್ನು ಹುಟ್ಟುಹಾಕಿದೆ. ಈ ಶ್ರೇಣಿಕೃತ ವ್ಯವಸ್ಥೆಯಲ್ಲಿ ಬರುವ ಅತ್ಯಂತ ಕಟ್ಟಕಡೆಯವರು ಈ ಸಮಾಜದಿಂದ ಅಂಚಿಗೆ ತಳ್ಳಲ್ಪಟ್ಟವರು ಮುಟ್ಟಿಸಿಕೊಳ್ಳಲಾರದೆ ಮರೆಯಲ್ಲೇ ಊರಾಚೆ ನೆಲೆಸಿರುವವರೇ ದಲಿತರು. "ಮೇಲ್ವಾರ್ಗದವರು ಜಾತಿ ಹೆಸ–ರಿನಲ್ಲಿ ತಳಸಮುದಾಯಗಳನ್ನು, ದಲಿತರನ್ನು ತಮ್ಮ ಮನಸಾ ಇಚ್ಚೆ ನಡೆಸಿಕೊಂಡು ಬಂದಿದ್ದಾರೆ. ಪ್ರಾಚೀನ ಕಾಲದ ದಲಿತರ ಸ್ಥಿತಿ ಮತ್ತು ಇಂದಿನ ದಲಿತರ ಸ್ಥಿತಿ ನೋಡಿದರೆ ನಮ್ಮ ಸಮಾಜ ಹೀಗೂ ಇತ್ತೇ? ಎಂದು ಆಶ್ಚರ್ಯವುಂಟಾಗುತ್ತದೆ. ಜಾತಿ ವ್ಯವಸ್ಥೆ ಮನುಷ್ಯರನ್ನು ಅಸಹಾಯಕತೆಯ ಸಂಕೋಲೆಯೊಳಗೆ ಬಂಧಿಸಿದೆ, ಸ್ವತಂತ್ರ್ಯ ಮತ್ತು ಸ್ವಾಭಿಮಾನಕ್ಕೆ ಧಕ್ಕೆಯನ್ನು ತಂದೊಡ್ಡಿದೆ. ಮನುಕುಲದ ದುರಂತಕ್ಕೆ ಕಾರಣವಾಗಿದೆ. ದಲಿತರಿಗೆ, ತಳಸಮುದಾಯದವರಿಗೆ, ನಿರ್ಗತಿಕರಿಗೆ, ಈ ಜಾತಿ ವ್ಯವಸ್ಥೆ ಉಸಿರುಗಟ್ಟಿಸುತ್ತಿದೆ. ಇಂತಹ ಜಾತಿ ವ್ಯವಸ್ಥೆಯ ಅಮಾನವೀಯ ಮೌಲ್ಯಗಳನ್ನು ತೊಡೆದು ಮನುಷ್ಯ ಕುಲ ಒಂದೇ ಎಂದು ಪ್ರತಿಪಾದಿಸಲು

ವಚನಕಾರರು, ಕೀರ್ತನಾಕಾರರು, ದಲಿತ–ಬಂಡಾಯದ ಕವಿಗಳು ವರ್ಗರಹಿತ, ಜಾತಿರಹಿತ ಸಮಾಜವನ್ನು ರೂಪಿಸಲು ಶ್ರಮಿಸಿದ್ದಾರೆ."[1] ಆದರೆ ಅದು ಇಂದಿಗೂ ಜೀವಂತವಾಗಿರುವುದು ವಿಷಾದನೀಯ. ಅದರಲ್ಲಿಯೂ ಕನ್ನಡ ಕಾವ್ಯ ಪರಂಪರೆಯ ಆದಿ ಪಂಪನಿಂದಿಡಿದು ಇಂದು ಬರೆಯುತ್ತಿರುವ ನಮ್ಮ ಕಾಲದ ಕವಿಗಳವರೆಗೂ ಜಾತಿ ವ್ಯವಸ್ಥೆಯ ಕ್ರೂರತ್ವವನ್ನು ಕಾವ್ಯದ ಮುಖೇನ ಹೊರಗೆಡವಿದ್ದಾರೆ. ಈ ಹಿನ್ನೆಲೆಯಲ್ಲಿ ಈ ತಲೆಮಾರಿನಲ್ಲಿ ಬರೆಯುತ್ತಿರುವ ದಲಿತ ಕವಯಿತ್ರಿಯರು ಕೂಡ ಜಾತಿ ವ್ಯವಸ್ಥೆಯ ವಿರುದ್ಧ ದನಿ ಎತ್ತಿದ್ದಾರೆ. ಜಾತಿ ವ್ಯವಸ್ಥೆಯು ನಿರ್ಮಿಸಿರುವ ಅನಾಹುತಗಳನ್ನು ಅನಾವರಣಗೊಳಿಸಿದ್ದಾರೆ. ಇದನ್ನು ಕಾವ್ಯದ ಮುಖೇನ ಚರ್ಚಿಸುವುದು ಔಚಿತ್ಯವಾಗಿದೆ. ಆದ್ದರಿಂದ ಜಾತಿ ವ್ಯವಸ್ಥೆಯ ಕುರಿತು ದಲಿತ ಮಹಿಳಾ ಕವಿಗಳು ಕಂಡಿರುವ ದರ್ಶನವನ್ನು ಈ ಮುಂದಿನಂತೆ ವಿಶ್ಲೇಷಿಸಲಾಗಿದೆ.

ಸಮಾಜ ಸುಧಾರಕ, ದಾರ್ಶನಿಕ ಕನಕದಾಸರು ಈ ಜಗತ್ತು 'ಕುಲ' ವೆಂಬ ಕುಲುಮೆಯಲ್ಲಿ ಬೇಯುತ್ತಿರುವುದನ್ನು ಕಂಡು 'ಕುಲಕುಲಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯನೇನಾದರು ಬಲ್ಲಿರಾ?' ಎಂದು ಜಾತಿ ವ್ಯವಸ್ಥೆಯು ಉಂಟುಮಾಡಿರುವ ತಾರತಮ್ಯವೊಂದನ್ನು ಪ್ರಶ್ನಿಸಿದ್ದಾರೆ. ಅದೇ ಪರಿಯಲ್ಲಿ ಡಾ. ಜಯದೇವಿ ಗಾಯಕವಾಡರವರು ಗಜಲ್‌ವೊಂದರಲ್ಲಿ ಹೀಗೆ ಪ್ರಸ್ತಾಪಿಸಿದ್ದಾರೆ.

"ಜಾತಿ ಧರ್ಮದ ಬೆಂಕಿಯಲ್ಲಿ ಮಾನವ ಕುಲ ಬೇಯುತ್ತಿದೆ ಕವಿತೆ
ಅದರ ಒಡಲ ಉರಿಯನೊಂದಿಷ್ಟು ನಂದಿಸಿ ಬಾ ಕವಿತೆ"[2]

ಇಡೀ ಮನುಷ್ಯ ಜಗತ್ತು ಜಾತಿ ಮತ್ತು ಧರ್ಮಗಳ ಬೆಂಕಿಯ ಕುಲುಮೆಯಲ್ಲಿ ಬೇಯುತ್ತಿದೆ. ಅಂತಹ ಬೇಯುತ್ತಿರುವ ಬದುಕನು ಹಸನು ಮಾಡಲು ಕವಿತೆಯ ಮೊರೆ ಹೋಗಿರುವುದು ಕಂಡುಬರುತ್ತದೆ. ಭಾರತದ ಜಾತಿವ್ಯವಸ್ಥೆಯನ್ನು ನಿರ್ಮೂಲನೆ ಮಾಡಲು ಅನೇಕರು ಶ್ರಮಿಸಿದ್ದಾರೆ. ಅವರೆಲ್ಲರೂ ಒಂದಲ್ಲ ಒಂದು ಮಾರ್ಗದ ಮುಖೇನ ಜಾತಿಯನ್ನು ಅಳಿಸಿಹಾಕುತ್ತಿದ್ದಾರೆ. ಅಂತಹ ಪ್ರಯತ್ನಗಳಲ್ಲಿ ನಮ್ಮ ಕವಿಗಳು ಕಾವ್ಯ ಮಾರ್ಗ ತುಳಿದಿರುವುದು ಗಮನೀಯ.

"ನಾವೆಲ್ಲಾ ಒಂದೇ ಎಂದು ಸಾರಿ ಹೇಳುವರು
ಮತ್ತೆ ಜಾತಿಗೊಡೆಯನ್ನು ಇಟ್ಟಿರುವರು
ಬದಲಾಗಿ ಎಂದು ಯಾಕೆ ಬೇಡಿದರು
ಭರವಸೆಯ ಮಾತನ್ನಾಡಿ ಸುಮ್ಮನಿರುವರು"[3]

"ದಲಿತರು ಮೌನ ಮುರಿದದ್ದು ನೋಡಿ
ನೀವೇಕೆ ಬೇರೆಯವರು
ನೀವು ಕೂಡ ನಮ್ಮಂತೆ ನಮಸ್ಕಾರ
ಬನ್ನಿ ಜೊತೆ ಸಾಗೋಣ"[4]

ಭಾರತದಲ್ಲಿ ಇತ್ತೀಚಿನ ದಿನಗಳಲ್ಲಿ ದಲಿತರ ಮೇಲೆ ಜಾತಿಯ ಕಾರಣಕ್ಕೆ ದೌರ್ಜನ್ಯ, ಹಿಂಸೆ, ದಬ್ಬಾಳಿಕೆಗಳು ಹೆಚ್ಚಾಗುತ್ತಿವೆ. ದಲಿತ ಯುವಕನೊಬ್ಬ ಕುದುರೆ ಮೇಲೆ ಫೋಟೊ ಕ್ಲಿಕ್ಕಿಸಿಕೊಂಡಿದ್ದಕ್ಕೆ, ದಲಿತ ಯುವಕನೊಬ್ಬ ಮೀಸೆ ಬಿಟ್ಟಿದ್ದಕ್ಕೆ, ಒಳ್ಳೆ ಬಟ್ಟೆ ಧರಿಸಿದ್ದಕ್ಕೆ, ಪ್ರೀತಿಸಿದ್ದಕ್ಕೆ, ತನ್ನ ಹೊಲದಲ್ಲಿ ಕೊಳವೆ ಬಾವಿ ಕೊರಿಸಿದ್ದಕ್ಕೆ ಹೀಗೆ ಕ್ಷುಲ್ಲಕ ಕಾರಣಕ್ಕೆ ದಲಿತರ ಏಳಿಗೆಯನ್ನು ಬಯಸದ ಮನುಸುಗಳು ಮನುಷ್ಯನ ಜೀವವನ್ನೇ ತೆಗೆಯುವ ಮಟ್ಟಕ್ಕೆ ನಾವು ತಲುಪಿದ್ದೇವೆ. ಇತ್ತೀಚಿಗೆ ಪತ್ರಿಕೆಯಲ್ಲಿ ಪ್ರಕಟವಾದ ವರದಿಯಂತೆ ತನಗೆ ವಧುವಿನ ಹುಡುಕಾಟ ಮಾಡುತ್ತಿರುತ್ತಾನೆ. ಇದರ ಸಲುವಾಗಿ ಪತ್ರಿಕೆಯ ಜಾಹಿರಾತು ಪ್ರಕಟಿಸುತ್ತಾರೆ. 'ವಧು ಬೇಕಾಗಿದ್ದಾಳೆ ಹೆಚ್.ಐ.ವಿ. ಇದ್ದರೂ ಪರವಾಗಿಲ್ಲ ಆದರೆ ದಲಿತರಾಗಿರಬಾರದು' ಎಂಬ ಸುದ್ದಿಯನ್ನು ಪ್ರಕಟಿಸಿದ್ದಾರೆ. ಇದು ನಾಗರೀಕ ಸಮಾಜವು ತಲೆತಗ್ಗಿಸುಂತಹದ್ದಾಗಿದೆ. ಹಿಂದೂ ನಾವೆಲ್ಲಾ ಒಂದು ಎಂದು ಬೊಗಳೆ ಬಿಡುವ ನಕಲಿ ಜಾತ್ಯಾತೀತವಾದಿಗಳು ಇಂದಿಗೂ ಅಸ್ಪೃಶ್ಯತೆಯನ್ನು ಜೀವಂತವಾಗಿ ಉಳಿದುಕೊಳ್ಳುಲು ಸಹಕರಿಸುತ್ತಿದ್ದಾರೆ. 'ಮರುಭೂಮಿ ಮಾಡದಿರಿ' ಸಂಕಲನದ ಕವಿತೆಯೊಂದರಲ್ಲಿ ಪ್ರಸ್ತಾಪಿಸಿದಂತೆ ಇಂದು ದಲಿತರು ಮೇಲ್ವರ್ಗದವರ ಸರಿಸಮನಾಗಿ ಬೌದ್ಧಿಕವಾಗಿ, ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಬೆಳೆದಿದ್ದಾರೆ ಎಂದರೆ ಅದಕ್ಕೆ ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಕೊಟ್ಟ ಸಂವಿಧಾನಿಕ ಫಲ. ಹೀಗೆ ಎಲ್ಲರಿಗೂ ಸಮಾನವಾಗಿ ಬೆಳೆದ ದಲಿತರನ್ನು ಮೇಲ್ವರ್ಗದವರು ಜಾತಿ ಅಸ್ಪೃಶ್ಯತೆಯ ಕೊಳಕನ್ನೇ ತುಂಬಿಕೊಂಡು ಹೊರಗೆ ಮಾತ್ರ ಜಾತ್ಯಾತೀತರಾಗಿ ವರ್ತಿಸುವ ಪರಿಯೊಂದನ್ನು ಡಾ. ಜಯದೇವಿಯವರು ಕಟ್ಟಿಕೊಟ್ಟಿದ್ದಾರೆ. ಇದು 'ಅಸ್ಪೃಶ್ಯತೆ'ಯ ಮತ್ತೊಂದು ಮುಖವೆಂದರೂ ತಪ್ಪಾಗಲಾರದು.

"ಬದುಕುತ್ತಿದ್ದೇನೆ ನಾನು
ಜೀತ ಮಾಡುವವರ ಮಧ್ಯ
ಅವರ ಮೃದು ಸ್ಪರ್ಶ ನಯವಾದ
ಮಾತು ತೊರಿಕೆಯ ನಗು
ಹುಸಿ ಮೌಲ್ಯಗಳಲ್ಲಿ

ಬದುಕುತ್ತಿದ್ದೇನೆ"[5]

ಹೀಗೆ ಒಳಗೆ ಅಸ್ಪೃಶ್ಯತೆಯ ನಂಜನ್ನಿಟ್ಟುಕೊಂಡು ಹೊರಗೆ ಮಾತ್ರ ತೋರಿಕೆಯ ನಗು ಬೀರುತ್ತಿರುವುದನ್ನು ಕಂಡಾಗ ವಿಜ್ಞಾನ ತಂತ್ರಜ್ಞಾನದಿಂದ ಇಷ್ಟೆಲ್ಲಾ ಅಭಿವೃದ್ಧಿ ಹೊಂದಿದರೂ ನಾವು ಇನ್ನೂ ಜಾತಿಯ ಕೂಪದಿಂದ ಹೊರ ಬರಲಾಗುತ್ತಿಲ್ಲವಲ್ಲಾ ಎಂಬ ಕಟುವಾಸ್ತವವನ್ನು ಬಿಚ್ಚಿಟ್ಟಿದ್ದಾರೆ.

"ಪ್ರಜಾ ಸಾಮ್ರಾಜ್ಯಕ್ಕೆ
ಮುಳ್ಳು ಬೇಲಿಗಳ ನಿಧಿ
ಜಾತಿ ಮತಗಳ ಕೊಳಕು"[6]

ಭಾರತ ಒಂದು ಪ್ರಜಾಪ್ರಭುತ್ವ ರಾಷ್ಟ್ರ ಪ್ರಜೆಗಳಿಂದಲೇ ಪ್ರಭುಗಳನ್ನು ಆಯ್ಕೆಮಾಡಿಕೊಳ್ಳುವ ವ್ಯವಸ್ಥೆಯಿದೆ. ಈ ಪ್ರಜಾಪ್ರಭುತ್ವದಲ್ಲಿ ವಾಸಿಸುವ ಎಲ್ಲಾ ಮನುಷ್ಯರು ಜಾತಿ, ಧರ್ಮ, ಬಣ್ಣ ಯಾವ ಬೇಧವೂ ಇಲ್ಲದೆ ಎಲ್ಲರನ್ನು ಸಮಾನತೆಯಿಂದ ಕಾಣಬೇಕಾಗಿದೆ. ಆದರೆ ನಮ್ಮ ಸಂವಿಧಾನದ ಆಶಯದಂತೆ ನಾವು ಬದುಕುತ್ತಿದ್ದೇವೆಯೇ ಎಂದು ಪ್ರಶ್ನಿಸಿದರೆ ಉತ್ತರ ಶೂನ್ಯ. ಇಂತಹ ಧಾರುಣ ಸ್ಥಿತಿಯೊಂದನ್ನು ಕಂಡ ಕವಯಿತ್ರಿ ಗಾಯಕವಾಡರು ಹೀಗೆ ಬರೆಯುತ್ತಾರೆ. 'ನೀವೇ ಕೈಯಾರೆ ನಿರ್ಮಿಸಿದ ಜಾತಿ ವ್ಯವಸ್ಥೆ ಇನ್ನೂ ಜೀವಂತವಾಗಿರುವುದನ್ನು ಹೇಗೆ ಸಹಿಸಲಿ ನಾನು?' ಎಂದು ಆಕ್ರೋಶ ವ್ಯಕ್ತಪಡಿಸುತ್ತಾರೆ. ಅಂದರೆ ನಮಗೆ ಅರಿವಿಲ್ಲದಂತೆಯೇ ನಮ್ಮ ಪೂರ್ವಿಕರು ಶತಶತಮಾನಗಳ ಹಿಂದೆ ನಿರ್ಮಿಸಿಕೊಂಡು ಬಂದಿರುವ ಈ ಅಸ್ಪೃಶ್ಯತೆಯೆಂಬ ಸಾಮಾಜಿಕ ಪಿಡುಗು ನಾಗರೀಕರಾಗಿ ನಾವು ಬಹುದೂರ ಸಾಗಿದ್ದರೂ, ಚಂದ್ರಲೋಕದಲ್ಲಿ ಮನುಷ್ಯ ಮನೆ ಮಾಡುವಷ್ಟು ವೈಜ್ಞಾನಿಕವಾಗಿ ಬೆಳೆದಿದ್ದರು ಭಾರತದಂತಹ ಸಂಪ್ರದಾಯವಾದಿ ರಾಷ್ಟ್ರದಲ್ಲಿ ಜಾತಿ ವ್ಯವಸ್ಥೆಯು ಜೀವಂತವಾಗಿರುವುದು ಮನುಷ್ಯ ಕುಲವೇ ತಲೆ ತಗ್ಗಿಸುವಂತಹ ಕೃತ್ಯವಾಗಿದೆ. ಇದನ್ನು ಹೋಗಲಾಡಿಸಲೆಂದು ಮೀಸಲಾತಿಯ ಹಕ್ಕನ್ನು ನೀಡಲಾಗಿದೆ. ಇಂತಹ ಮೀಸಲಾತಿಯ ಹಕ್ಕನ್ನು ಪಡೆದುಕೊಂಡು ಬೆಳೆದಿರುವ ನಮ್ಮ ರಾಜಕೀಯ ನಾಯಕರು ತಾವು, ತಮ್ಮ ಮಕ್ಕಳು, ಮೊಮ್ಮಕ್ಕಳು ಕೂತು ತಿಂದು ತೇಗಿದರೂ ಕರಗದಷ್ಟು ಸಂಪತ್ತನ್ನು ಸಮುದಾಯದ ಹೆಸರೇಳಿಕೊಂಡು ಕಬಳಿಸುತ್ತಿದ್ದಾರೆ. ಭಾರತದಲ್ಲಿ ಜಾತಿ ವ್ಯವಸ್ಥೆ ವಿನಾಶವಾಗಲು ಸಾಮಾಜಿಕ ಸಮಾನತೆಯ ಪ್ರಜ್ಞೆ ಎಲ್ಲರಲ್ಲಿಯೂ ಮೂಡಿಬರಬೇಕಾಗಿರುವುದು ಎಷ್ಟು ಮೂಖ್ಯವೋ ನಮ್ಮ ಜನ ಪ್ರತಿನಿಧಿಗಳು ಇಚ್ಛಾಶಕ್ತಿಯೂ ಕೂಡ ಮುಖ್ಯವಾಗುತ್ತದೆ. ಆದರೆ ಇತ್ತೀಚಿನ

ದಿನಗಳಲ್ಲಿ ಜಾತಿಗೊಬ್ಬ ನಾಯಕ, ಜಾತಿಗೊಂದೊಂದು ಮಠ ರೂಪುಗೊಳ್ಳುತ್ತಿದೆ. ಇವರು ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಜಾತಿಯನ್ನು ಜೀವಂತವಾಗಿ ಉಳಿಸಿಕೊಂಡು ಬರಲಾಗುತ್ತಿದೆ. ಇದಕ್ಕೆ ಉದಾಹರಣೆಯಾಗಿ ಈ ಕೆಳಗಿನ ಸಾಲುಗಳನ್ನು ಸಾಕ್ಷಿಕರಿಸಬಹುದು.

"ಜಾತಿ ಧರ್ಮಗಳು ಸೃಷ್ಟಿಸುತ್ತಿವೆ ಎಲ್ಲೆಲ್ಲೂ ಅಸಮಾನತೆ
ರಾಜಕಾರಣ ಹುಟ್ಟಿಸುತ್ತಿದೆ ಎಲ್ಲೆಲ್ಲೂ ಬೆಂಕಿಯ ಜ್ವಾಲೆ"[7]

ಜಾತಿ ಮತ್ತು ಧರ್ಮಗಳು ಸೃಷ್ಟಿಸುತ್ತಿರುವ ಅಸಮಾನತೆ ಕಂಡು ಬೇಸರ ವ್ಯಕ್ತಪಡಿಸುವ ಕವಿ ಮುಂದುವರೆದು ಮತ್ತೊಂದು ಕವಿತೆಯಲ್ಲಿ ಜಾತಿಯ ಹೆಸ–ರಿನಲ್ಲಿ ದೇಶ ಹಾಳು ಮಾಡುವ ನೀಚರನ್ನು ಗಲ್ಲಿಗೇರಿಸಬೇಕಿದೆ ಎಂದು ಜಾತಿಯ ಹೆಸರಿನಲ್ಲಿ ಒಡೆದು ಆಳುತ್ತಿರುವ ಪ್ರಜಾನಾಯಕರ ಬಗ್ಗೆ ಕಿಡಿಕಾರುತ್ತಾರೆ.

ಡಾ. ಅನುಸೂಯ ಕಾಂಬಳೆ ಅವರು ನಮ್ಮೆದುರೇ ನಡೆದ 'ಕಂಬಾಲಪಲ್ಲಿ ದಲಿತ ಹತ್ಯಾಕಾಂಡ' ಕುರಿತು 'ಊಟ ಮತ್ತು ಕಂಬಾಲಪಲ್ಲಿ ಕವಿತೆಯಲ್ಲಿ ಸಮರ್ಥವಾಗಿ ನಿರೂಪಿಸಿದ್ದಾರೆ.

"ಗೂಳಿಯಂತೆ ನುಗ್ಗಿದರು, ಚಿಲಕ ಹಾಕಿ
ಬೆಂಕಿಯಂತೆ ಚೆಲ್ಲಿದರು ಮನೆಗಳಿಗೆ
ಕಾದು ಕೆಂಪಾದ ಹೆಂಚಿಗೆ ನೀರು ಬಿದ್ದಂತೆ
ಉರಿಯೊಡನೆ ಉರಿಯ ತೊಡಗಿದರು ನನ್ನ ಬಳಗ"[8]

ಬಸವಾದಿ ಶರಣರು ಹುಟ್ಟಿದ ಈ ನಾಡಿನಲ್ಲಿ ಸಮಸಮಾಜವನ್ನು ನಿರ್ಮಾಣಮಾಡುವ ಕನಸೊಂದು ಕಂಡಿದ್ದರು. ಆದರೆ ಅದು ಸಾಧ್ಯವಾಗದೇ ಹೋಯಿತು. ಶಾಂತಿಯನ್ನು ಬಯಸುವ ಈ ನಾಡಿನಲ್ಲಿ ಜಾತಿಯ ಕಾರಣ–ಕ್ಕೆ ಅದೆಷ್ಟೋ ಕೊಲೆ, ದೌರ್ಜನ್ಯ ಪ್ರಕರಣಗಳು ಕರ್ನಾಟಕದ 30 ಜಿಲ್ಲೆಗಳಲ್ಲೂ ದಾಖಲಾಗಿವೆ. ಅಂತಹ ಪ್ರಕರಣಗಳಲ್ಲಿ ಕಂಬಾಲಪಲ್ಲಿ ದಲಿತರ ಕಗ್ಗೊಲೆ ಪ್ರಕರಣವೂ ಬಹಳ ನಿಕೃಷ್ಟವಾದದ್ದು. ಕೋಲಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಕಂಬಾಲಪಲ್ಲಿ ಎಂಬ ಗ್ರಾಮದಲ್ಲಿ ದಲಿತ ಮತ್ತು ಸವರ್ಣಿಯರ ನಡುವೆ ನಡೆದ ಘರ್ಷಣೆಯಲ್ಲಿ ಏಳು ಜನ ದಲಿತರನ್ನು ಒಂದು ಗುಡಿಸಲಲ್ಲಿ ಕೂಡಿ ಹಾಕಿ ಬೆಂಕಿಹಚ್ಚಿ ಸಜೀವವಾಗಿ ಸುಟ್ಟರು, ಕೇಕೆ ಹಾಕಿದರು ಇಂತಹ ಪೈಶಾಚಿಕ ಕೃತ್ಯ ನಡೆಯಿತು. ದಲಿತರು ರಾಜಕೀಯ ಹಾಗೂ ಸಾಮಾಜಿಕವಾಗಿ ಅಭಿವೃದ್ಧಿಗೆ ಸಂಬಂಧಿಸಿದಂತೆ ಗ್ರಾಮದ ಸವರ್ಣೀಯರೂ, ಭೂ ಹಿಡುವಳಿದಾರರೂ ಹಾಗೂ ಉಳಿಗಮಾನ್ಯಶಾಹಿಗಳಂತಹ

ರೆಡ್ಡಿ ಜನಾಂಗದವರನ್ನು ಎದುರು ಹಾಕಿಕೊಂಡದ್ದು ಪ್ರಮುಖ ಕಾರಣವಾಗಿತ್ತು. ದಲಿತರು ರೆಡ್ಡಿ ಜನಾಂಗದವರ ಎದುರಲ್ಲಿ ಶುದ್ಧ ಬಟ್ಟೆ ತೊಟ್ಟುಕೊಂಡು ಸವರ್ಣಿಯ–ರಿಗೆ ಸರಿಸಮನಾಗಿ ಓಡಾಡುತ್ತಿದುದ್ದು, ನಾಗರಿಕತೆಗೆ ತಕ್ಕಂತೆ ಹೆಸರುಗಳನ್ನು ಬದಲಾಯಿಸಿಕೊಂಡಿದ್ದೂ, ಸರ್ಕಾರದಿಂದ ಸಿಗುವ ಸೌಲಭ್ಯಗಳಿಂದಾಗಿ ದಲಿತ ಯುವಕರು ಬೆಂಗಳೂರಿನಂತಹ ಪಟ್ಟಣ ಸೇರಿಕೊಂಡು ಉನ್ನತ ಶಿಕ್ಷಣ ಪಡೆದದ್ದು, ರೆಡ್ಡಿಗಳ ಕೃಷಿ ಕೆಲಸಕ್ಕೆ, ಮನೆ ಕೆಲಸಕ್ಕೆ ಕೂಲಿ ಆಳುಗಳಾಗಿ ದುಡಿಯುವುದ–ರಿಂದ ಮುಕ್ತಿ ಪಡೆದಿದ್ದರು. ಇದನ್ನು ಮೇಲ್ವರ್ಗದವರಿಗೆ ಸಹಿಸಲಾಗದಾಯಿತು. ಶತಮಾನಗಳಿಂದ ಅಸ್ಪೃಶ್ಯತೆ ಹಾಗೂ ಶೋಷಣೆಯಿಂದ ಬಳಲಿ ಬೆಂಡಾಗಿದ್ದ ದಲಿತ ಯುವಕರು ಸಮಾನತೆಯ ಪ್ರಶ್ನೆಯೆತ್ತಿದ್ದಕ್ಕೆ ಇಂತಹ ಕೃತ್ಯ ನೆಡೆಸಲಾಯಿತು. ನಮ್ಮ ಕಣ್ಣೆದುರೇ ಇಂತಹ ಭೀಕರ ದುರಂತ ನಡೆದರೂ ಸಾಕ್ಷಿಗಳ ಕೊರತೆಯಿಂದ ಕೊಲೆಗಡುಕರು ಶಿಕ್ಷೆಯಿಂದ ತಪ್ಪಿಸಿಕೊಂಡರು. ಇದಕ್ಕೆ ಬೆಂಬಲವಾಗಿ ಪೋಲೀಸ್ ಅಧಿಕಾರಿಗಳು, ಸರ್ಕಾರದ ವೈಫಲ್ಯ. ದಲಿತ ಸಮುದಾಯದ ಮಂತ್ರಿ ಇದ್ದಾಗಲೂ ಈ ಪ್ರಕರಣವನ್ನು ಕೇವಲ ಶಾಂತಿಸಭೆ ಮಾಡುವ ಮೂಲಕ ಮುಚ್ಚಿ ಹಾಕಲಾಯಿತು. ಭಾರತದಾದ್ಯಂತ ಲೆಕ್ಕವಿಲ್ಲದಷ್ಟು ಪ್ರಕರಣಗಳು ಇಂದಿಗೂ ನಡೆಯುತ್ತಲೇಯಿವೆ. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ದಲಿತರ ಬದುಕುಗಳಿವೆ ಎಂಬುದನ್ನು ಅನುಸೂಯ ಕಾಂಬಳೆ ಅವರ ಕವಿತೆ ಕಟ್ಟಿಕೊಡುತ್ತದೆ.

ಮತ್ತೊಬ್ಬ ಕವಯಿತ್ರಿ ದಲಿತರ ಬದುಕಿನ ಅಸಹಾಯಕತೆಗೆ ಮರುಗುತ್ತಾ 'ದಲಿತರ ಸುಖನಿದ್ದೆಗಳ ಕಸಿಯದಿರಿ/ಬಡವರ ಜೋಪಡಿಗೆ/ಬೆಂಕಿ ಹಚ್ಚದಿರಿ' ಎಂದು ಅಸಹಾಯಕರಾಗಿರುವ ದಲಿತರಿಗೆ ನೆಮ್ಮದಿಯಾಗಿ ಬದುಕಲು ಬಿಟ್ಟುಬಿಡಿ ಎಂಬಂತೆ ಚಿತ್ರಿಸಿದ್ದಾರೆ.

> "ಜಾತಿಯ ಹೂವೇ ಘಮ ಘಮಿಸಿ ಅರಳುತ್ತದೆ. ಅಯ್ಯೋ ಈ ದೇಶದಲ್ಲಿ ಸಾಕಿ
> ನನಗಿಂತ ಗೋವಿನ ಮೂತ್ರವೇ ಶ್ರೇಷ್ಠವಾಗುತ್ತಿದೆ ಅಯ್ಯೋ ಈ ದೇಶದಲ್ಲಿ"[9]

ಭಾರತದಲ್ಲಿ ಜಾತಿ ವ್ಯವಸ್ಥೆಯು ಎಷ್ಟು ಆಳವಾಗಿ ತನ್ನ ಬೇರುಗಳನ್ನು ಬಿಟ್ಟಿದೆ ಎಂದರೆ ಮೂಕ ಪ್ರಾಣಿಗಳನ್ನು ಮನೆಯ ಒಳಗೆ ಕರೆದುಕೊಳ್ಳುತ್ತಾರೆ, ಆದರೆ ಅಸ್ಪೃಶ್ಯರನ್ನು ಮುಟ್ಟಲೂ ಸಹ ಹೇಸಿಗೆ ಪಡುತ್ತಾರೆ. ಅದರಲ್ಲಿಯೂ ಇತ್ತೀಚಿನ ದಿನಗಳಲ್ಲಿ ಗೋವಿನ ಮೇಲೆ ರಾಜಕಾರಣ ಮಾಡಲು ಹೊರಟಿದ್ದಾರೆ. ಇತ್ತೀಚೆಗೆ ಗುಜರಾತಿನಲ್ಲಿ ದನದ ಚರ್ಮ ಸುಲಿದರೆನ್ನುವ ಕಾರಣಕ್ಕೆ ದಲಿತರನ್ನು ಪಶುಗಳ ರೀತಿಯಲ್ಲಿ ಹಿಂಸ್ಮಾತ್ಮಕವಾಗಿ ನಡೆಸಿಕೊಂಡಿರುವ ಘಟನೆ ನಮ್ಮ ಕಣ್ಣ

ಮುಂದಿದೆ, ಅಷ್ಟೇ ಅಲ್ಲದೆ ಗೋವನ್ನು ದೈವೀಕರಣಗೊಳಿಸಲಾಗುತ್ತಿದೆ. ಗೋವು ಒಂದು ಸಾಮುದಾಯದ ಆಹಾರ ಮತ್ತು ಜೀವನದ ಕ್ರಮವಾದರೆ ಮತ್ತೊಂದು ಸಮುದಾಯಕ್ಕೆ ದೈವದ ನೆಲೆಯಲ್ಲಿ ಬಿಂಭಿಸಲಾಗುತ್ತಿದೆ. ಹಸಿವಿಗಾಗಿ ಹಸುವಿನ ಮಾಂಸವನ್ನು ತಿನ್ನುವುದು ಹೇಗೆ ತಪ್ಪಾಗುತ್ತದೆ. ಇದು ಇಲ್ಲಿಗೇ ನಿಲ್ಲದೆ ಗೋ ಮೂತ್ರವೂ ಸಹ ಪವಿತ್ರವೆನ್ನುವಂತೆ ವೈಭವೀಕರಿಸಲಾಗುತ್ತಿದೆ. 'ಗೋವು' ಹಲವು ಸಮುದಾಯಗಳ ಆಹಾರ ಪದ್ಧತಿಯು ಹೌದು. ಆದರೆ ಅಂತಹ ಅನ್ನದ ಮೇಲೆ ರಾಜಕಾರಣ ಮಾಡುತ್ತಿರುವುದು ಎಷ್ಟರಮಟ್ಟಿಗೆ ಸರಿ ಎಂಬುದನ್ನು ನಾವೇ ಯೋಚಿಸಬೇಕಾಗಿದೆ. ಇದು ನಮ್ಮ ದೇಶದ ಬಹುದೊಡ್ಡ ಸಾಂಸ್ಕೃತಿಕ ರಾಜಕಾರಣ ಎಂದೇ ಹೇಳಬಹುದು.

"ಸಿಟ್ಟು ಬೆನ್ನಿಗೆ ಅಂಟಿಸಿಕೊಂಡು ಬಂದವರು
ದ್ವೇಷ ಅಸೂಯೆ
ಅರಿಯದ ಅಮಾಯಕರು
ಅಸಮಾನತೆಯನ್ನು ಅವಡುಗಚ್ಚಿ
ಬಚ್ಚಿಟ್ಟುಕೊಂಡು ನಿಂತವರು"[10]

ಡಾ. ಸುಜಾತ ಚಲವಾದಿ ಅವರು 'ಅಸ್ಪೃಶ್ಯರು' ಎನ್ನುವ ಕವಿತೆಯಲ್ಲಿ ತನ್ನವರ/ತನ್ನ ಸಮುದಾಯದ ಅಸಹಾಯಕ ಬದುಕಿನ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ. ನನ್ನವರು ಎಂದು ಆಪ್ಯಾಯಮಾನವಾಗಿ ಕರೆಯುತ್ತಾ ತನ್ನ ಸಮುದಾಯವು ತಲೆಮಾರುಗಳಿಂದ ಅನುಭವಿಸುತ್ತಿರುವ ಸಂಕಟದ ಸ್ಥಿತಿಯೊಂದನ್ನು ಈ ಕವಿತೆಯಲ್ಲಿ ಕಂಡರಿಸಿದ್ದಾರೆ.

"ಅಳುವಿನಲ್ಲಿ ಸಂಭ್ರಮ ಕಂಡವರು ನಾವು
ಹಬ್ಬಹರಿದಿನಗಳಲ್ಲಿ ಜಾತ್ರೆಗಳಲ್ಲಿ ದೂರ ನಿಂತವರು
ಬಾಳಿನುದ್ದಕ್ಕೂ ಮೈಲಿಗೆಯಾದವರು ನನ್ನವರು
ಅವಡುಗಚ್ಚಿದ ಸಿಟ್ಟು ಕಂಗಾಲದ ಬದುಕು
ಚಳುವಳಿಯಾಗಿ ಬಂದ ಜಾತಿಯ ಪಿಡುಗು ಅಳಸಲಾಗದು
ಅಳಕಿಲ್ಲದ ಕಳಂಕ ಹೊತ್ತುಕೊಂಡವರು
ಕಳಂಕವಿಲ್ಲದ ನಾಗರೀಕ ಜೀವನ ನಡೆಸಿದವರು
ಕಳೆಗುಂದದ ಹೀನಾಯ ಬದುಕಲ್ಲಿ ಹೊಸ ಬದುಕು
ಅರಸಿ ಹೊರಟವರು"[11]

ಡಾ. ಸಿದ್ಧಲಿಂಗಯ್ಯ ಅವರ 'ನನ್ನ ಜನಗಳು' ಕವಿತೆಯ ದಾಟಿಯಲ್ಲಿಯೇ ಅಭಿವ್ಯಕ್ತಿಗೊಂಡಿರುವ ಈ ಕವಿತೆ ತನ್ನದಲ್ಲದ ತಪ್ಪಿಗೆ ಶತಮಾನಗಳಿಂದಲೂ ಮುಟ್ಟಾಗಿ ಊರಚೆಯೇ ಬದುಕು ಸವೆದವರ ಕಣ್ಣೀರ ಕತೆಯಲ್ಲಿ ಜಾತಿಯೆಂಬ ಪಿಡುಗನ್ನು ಬಳುವಳಿಯಾಗಿ ಹೊತ್ತು ಬರಲಾಗುತ್ತಿದೆ. ಇದನ್ನು ಅಳಿಸಿ ಹಾಕುವವರಾರು ಎಂಬ ಪ್ರಶ್ನೆಗೆ ಸುಜಾತರವರು ಮತ್ತೊಂದು ಕವಿತೆಯಲ್ಲಿ ಪ್ರಸ್ತಾಪಿಸುತ್ತಾ ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಚಿಂತನೆಗಳಿಂದ ಮಾತ್ರ ಈ ಜಾತಿ ಪ್ರಜ್ಞೆಯನ್ನು ಅಳಿಸಲು ಸಾಧ್ಯ ಎನ್ನುತ್ತಾರೆ.

"ಕವಿತೆ ಮೀಸಲೆಂಬ ಊರುಗೋಲಿನ ಮೇಲೆ ನೆಲೆ ನಿಂತವರು,
ಪ್ರತಿಭೆಯಲ್ಲಿ ಹಿಂದಿಲ್ಲದವರು
ತಾರತಮ್ಯಕ್ಕೆ ಒಳಗಾದವರು
ಸ್ವಾಭಿಮಾನ ಬಿಟ್ಟುಕೊಡದವರು" 12

ಭಾರತದಲ್ಲಿ ಜಾತಿಯೆಂಬ ಜಾಡ್ಯವನ್ನು ಅಳಿಸಿಹಾಕಲು ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಮೀಸಲಾತಿಯನ್ನು ಕಲ್ಪಿಸಿಕೊಟ್ಟರು. ಅಂಬೇಡ್ಕರ್‌ರವರು ಕಲ್ಪಿಸಿಕೊಟ್ಟ ಮೀಸಲಾತಿಯ ಹಕ್ಕಿನಿಂದಲೇ ಇಂದು ಮನುಷ್ಯ ಸಮಾಜದಲ್ಲಿ ಅಸ್ಪೃಶ್ಯರಿಗೆ, ಹಿಂದುಳಿದವರಿಗೆ ತುಳಿತಕ್ಕೆ ಒಳಗಾದ ಸಮುದಾಯಗಳಿಗೆ ಬೆಳಕನ್ನು ತೋರಿದ ಮಹಾ ಗುರುವಾಗಿದ್ದಾರೆ. ಆದರೆ ಈ ಅಸ್ಪೃಶ್ಯತೆಯ ಅಸಮಾನತೆಯನ್ನು ಹೋಗಲಾಡಿಸಲು ಜಾರಿಗೆ ತಂದ ಮೀಸಲಾತಿಯನ್ನು ಸಮರ್ಪಕವಾಗಿ ಜಾ–ರಿಗೆ ತರುವಲ್ಲಿ ನಮ್ಮನ್ನು ಆಳುತ್ತಿರುವ ವರ್ಗ ಮೀನಾಮೇಷ ಎಣಿಸುತ್ತಿರುವುದು ವಿಪರ್ಯಾಸವೇ ಸರಿ. ಇತ್ತೀಚಿನ ದಿನಗಳಲ್ಲಂತು ಯುವ ಸಮುದಾಯವು ಮೀಸಲಾತಿಯನ್ನು ಕೇವಲ ದಲಿತರಿಗೆ ಮಾತ್ರ ಕಲ್ಪಿಸಿಕೊಡಲಾಗಿದೆ ಎಂಬಂತೆ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚಿಸುತ್ತಿದ್ದಾರೆ. ಆದರೆ 'ಇತಿಹಾಸವನ್ನು ತಿಳಿಯದವನು ಇತಿಹಾಸವನ್ನು ನಿರ್ಮಿಸಲಾರ' ಎಂಬುವ ನುಡಿಯಂತೆ ಚರಿತ್ರೆಯು ಗೊತ್ತಿಲ್ಲದವರು ಮೀಸಲಾತಿಯನ್ನು ಯಾರಿಗೆ ಯಾಕೆ ಕಲ್ಪಿಸಲಾಗಿದೆ ಎಂಬ ಅಲ್ಪ ಜ್ಞಾನವೂ ಇಲ್ಲ. ಕನಿಷ್ಠ ಪಕ್ಷ ಅವರು ಆ ಮಟ್ಟಕ್ಕೆ ಯೋಚಿಸುವುದೂ ಇಲ್ಲ. ಇವರೆಲ್ಲರೂ ಕೇವಲ ಪೇಸ್ಬುಕ್ ಮತ್ತು ವಾಟ್ಸ್‌ಆಫ್ ಯುನಿವರ್ಸಿಟಿ ಉತ್ಪನ್ನಗಳಾಗಿದ್ದಾರೆ ಎಂಬುದರಲ್ಲಿ ಯಾವ ಅನುಮಾನವೂ ಸಹ ಇಲ್ಲ.

ಜನಪ್ರತಿನಿಧಿಗಳೇ ತಮ್ಮ ರಾಜಕೀಯ ಹಿತಾಶಕ್ತಿಯಿಂದ ಬಡವರನ್ನು ಬಡವರಾಗಿಯೇ ಉಳಿಸಿಕೊಳ್ಳುವ ವ್ಯವಸ್ಥೆಯನ್ನು ವ್ಯವಸ್ಥಿತವಾಗಿ ನಿಭಾಯಿಸಿಕೊಂಡು

ಬರಲಾಗುತ್ತಿದೆ. ಆದ್ದರಿಂದಲೇ ಈ ತಾರತಮ್ಯದ ಬದುಕಿನಲ್ಲಿ ಸ್ವಾಭಿಮಾನ ಕಳೆದುಕೊಳ್ಳದೆ ಬದುಕುತ್ತಿದ್ದಾರೆ ನನ್ನ ಜನ ಎಂದು ಸುಜಾತ ಚಲವಾದಿಯವರು ಅಭಿಪ್ರಾಯ ಪಡುತ್ತಾರೆ.

"ಕೊಳಗೇರಿ ಕೊಳಚೆ ಸ್ಲಂ ಅಸ್ಪೃಶ್ಯರೆನ್ನುತ್ತಾ
ಭಿನ್ನಬೇದ ಮಾಡುವ ಅಜ್ಞಾನಿಗಳೇ
ನಿಮ್ಮ ಮಲೀನ ಮಸ್ತಕದ ಕೊಳಚೆಗಳ
ತೊಳೆ ತೊಳೆದು ಹಸನಾಗಿಸುವ"[13]

ಕವಯಿತ್ರಿ ಎನ್. ಡಿ. ವೆಂಕಟಮ್ಮ ಅವರು ನಗರ ಪ್ರದೇಶದಲ್ಲಿ ನಡೆಯುವ, ನಡೆಸಿಕೊಂಡು ಬರುತ್ತಿರುವ ಅಸ್ಪೃಶ್ಯತಾ ಆಚಾರಣೆಯ ಮುಖವೊಂದನ್ನು ತಮ್ಮ ಕವಿತೆಯಲ್ಲಿ ದರ್ಶಿಸಿದ್ದಾರೆ. ಗ್ರಾಮೀಣ ಪ್ರದೇಶಗಳ ಅಸ್ಪೃಶ್ಯತೆ ಒಂದು ಬಗೆಯದ್ದಾದರೆ ನಗರ ಪ್ರದೇಶಗಳಲ್ಲಿ ಸ್ಲಂಗಳಲ್ಲಿನ ಜನರನ್ನು ಅಸ್ಪೃಶ್ಯರನ್ನಾಗಿ ಕಾಣಲಾಗುತ್ತಿದೆ. ಇಂತಹ ಕೋಳಗೇರಿಗಳಲ್ಲಿನ ಜನರೆ ಈ ನಗರದ ಸ್ವಚ್ಚತಾಕರ್ಮಿಗಳು ಮೊದಲು ನಿಮ್ಮ ಮನಸ್ಸಿನಲ್ಲಿ / ತಲೆಯಲ್ಲಿ ತುಂಬಿಕೊಂಡಿರುವ ಭಿನ್ನಬೇದದ ಕೊಳಕನ್ನು ಮೊದಲು ಹಸನುಮಾಡಿಕೊಳ್ಳಿ ಎಂದು ಕವಯಿತ್ರಿ ಪ್ರಸ್ತಾಪಿಸುತ್ತಾರೆ. ಅಂದರೆ ಅವರು ವಾಸುಸುತ್ತಿರುವ ಪ್ರದೇಶ, ಅವರು ಹಾಕಿರುವ ಬಟ್ಟೆಯನ್ನು ನೋಡಿ ಅವರನ್ನು ಸ್ಲಂ ಜನ ಎಂದು ಬೇದಭಾವ ಮಾಡುವವರ ಕಂಡು ಇನ್ನೂ ಎಷ್ಟುದಿನ ನಮ್ಮನ್ನು ಹೀಗೆ ತುಳಿಯುತ್ತೀರಿ. ಶತಮಾನಗಳಿಂದಲೂ ತುಳಿದಿದ್ದು ಸಾಕು ಮೊದಲು ಮನುಷ್ಯತ್ವಕ್ಕೆ ಬೆಲೆ ಕೊಡಿ ಸಮಾನತೆಯನ್ನು ನೀಡಿ ನಾವೆಲ್ಲರೂ ಒಂದೇ ಎಂಬುದನ್ನು ಸಾರಿ ಎಂದು ವಿಶ್ವ ಮಾನವ ಸಂದೇಶವನ್ನು ಸಾರುತ್ತಾರೆ. ಮತ್ತೊಂದು ಕವಿತೆಯಲ್ಲಿ ತಾವು ಈ ಸ್ಥಿತಿಗೆ ಬರಲು ಮುಖ್ಯ ಕಾರಣ ನಮ್ಮ ಅಜ್ಞಾನವಾಗಿದೆ. ಅದ್ದರಿಂದ ಶಿಕ್ಷಣ ಹೋರಾಟಕ್ಕೆ ಸಂಘಟಿತರಾಗೋಣ ಅಕ್ಷರ ಬೀಜ ಬಿತ್ತಲು ಕ್ರಾಂತಿಜ್ಯೋತಿ ಹಬ್ಬಿಸೋಣ ಸಂಸ್ಕಾರದ ಶಿಕ್ಷಣ ಪಡೆದು ನವ ಸಾಕ್ಷರರಾಗೋಣ ಎಂದು ತನ್ನ ಸಮುದಾಯವು ಅಕ್ಷರ ಸಂಸ್ಕೃತಿಯನ್ನು ಅಪ್ಪಿಕೊಳ್ಳುವಂತೆ ತನ್ನ ಸಮುದಾಯಕ್ಕೆ ಮಾರ್ಗದರ್ಶನದಂತೆ ಕಂಡರಿಸುತ್ತದೆ.

"ಜಾತಿಗೊಂದು ಧರ್ಮಕೊಂದು ರುದ್ರಭೂಮಿ ಈ ಜಗದಲ್ಲಿ
ಹುಳಲು ಸ್ಥಳವಿಲ್ಲದೆ ಶವಗಳನ್ನು ಗಂಗೆಯಮುನೋತ್ರಿಯಲ್ಲಿ ಎಸೆಯುತ್ತಾರೆ ಸಾಕಿ"[14]

ಮಲ್ಲಮ್ಮ ಯಾಟಗಲ್‌ರವರು ಬದುಕಿರುವ ಮನುಷ್ಯರ ಮಧ್ಯ ನಡೆಯುತ್ತಿರುವ ಅಸ್ಪೃಶ್ಯತೆಗೆ ಮಿಗಿಲಾಗಿ ಭಾರತದಲ್ಲಿ ಜಾತಿಗೊಂದು ಕೇರಿ,

ಜಾತಿಗೊಂದು ಮತವೆಂಬಂತೆ ಸ್ಮಶಾನಗಳು ಸಹ ಆಯಾ ಜಾತಿಗೊಂದರಂತೆ ಹುಟ್ಟಿಕೊಂಡಿವೆ. ಬದುಕಿರುವ ಮನುಷ್ಯನಿಗೂ ಬೆಲೆಕೊಡದವರು ಸತ್ತ ಮೇಲೆ ಬೆಲೆ ಕೋಡುತ್ತಾರೆಯೇ? ಖಂಡಿತವಾಗಿಯೂ ಇಲ್ಲಾ. ಎಷ್ಟೋ ಊರುಗಳಲ್ಲಿ ದಲಿತರಿಗೆ ರುದ್ರಭೂಮಿಗಳೇ ಇಲ್ಲ. ಇಂತಹ ರುದ್ರಭೂಮಿಗಳಿಲ್ಲಿದೆ ಶವಗಳನ್ನು ಅನಾತವಾಗಿ ಗಂಗೆಯಮುನೆಯ ಪಾಲಾಗುತ್ತಿರುವವರು ಎಂದು ಶವಗಳ ಮೇಲೆಯೂ ಸಹ ಜಾತೀಯತೆ ಮಾಡುವವರ ಕಂಡ ಮಲ್ಲಮ್ಮ ಯಾಟಗಲ್ ಅವರು ಆಕ್ರೋಶಗೊಂಡು ಶವದ ಮೇಲೆ ರಾಜಕೀಯ, ಜಾತಿಯತೆ ಮಾಡುವವರನ್ನು ಸುಟ್ಟುಬಿಡಬೇಕು ಎಂದು ಕಿಡಿಕಾರುತ್ತಾರೆ.

"ಜಾತಿಯ ಕಿಚ್ಚಿನಲ್ಲಿ ಬೆಂದ ಜನರೇ
ಕುಲದ ಗಾಯದಲ್ಲಿ ನೊಂದ ಜನರೇ
ಏಳಿ ಎದ್ದೇಳಿ
ಹೊಸ ಕ್ರಾಂತಿ ಹಾಡು ಹಾಡಲು
ಹೊಸ ಹೆಜ್ಜೆಯ ನಡುಗೆ ಹಾಕಲು"[15]

ಜಾತಿ ಎಂಬ ಜಾಡ್ಯವನ್ನು ಬೇರು ಸಹಿತ ಕಿತ್ತೊಗೆಯಲು ಶತಮಾನಗಳಿಂದ ನಡೆಯುತ್ತಿರುವ ಕುಲದ ಗಾಯದ ನೋವಿಗೆ ಮುಲಾಮು ಹಚ್ಚಲು ತನ್ನ ಸಮುದಾಯವನ್ನು ಎಚ್ಚರಿಸಿ ಜಾತಿ ಕ್ರೌರ್ಯದಿಂದ ಬಿಡುಗಡೆ ಹೊಂದಲು 'ಏಳಿ ಎದ್ದೇಳಿ' ಎಂದು ಎಚ್ಚರಿಸುವ ಬಗೆಯೊಂದು ಈ ಕವಿತೆಯಲ್ಲಿ ಕಾಣಬಹುದು.

ಹೀಗೆ ಹೊಸ ತಲೆಮಾರಿನ ದಲಿತ ಕವಯಿತ್ರಿಯರು ತಮ್ಮ ಕಾವ್ಯಗಳ ಮೂಲಕ ಜಾತಿಯು ನಿರ್ಮಿಸಿರುವ ಅಸಮಾನತೆಯ ಬದುಕುಗಳನ್ನು ತೆರೆದಿಡುವುದರ ಜೊತೆಗೆ ಈ ವ್ಯವಸ್ಥೆ ತಮ್ಮನ್ನು ಕ್ರೂರವಾಗಿ ಕಂಡರೂ ಅದನ್ನು ಮೆಟ್ಟಿ ನಿಂತು ಬದುಕು ಮುಖ್ಯವೆಂದು ಛಿದ್ರ ಬದುಕನ್ನು ಪ್ರೀತಿಸುತ್ತಾ ಬಾಬಾ ಸಾಹೇಬರು ಹಾಕಿಕೊಟ್ಟ ಶಿಕ್ಷಣ, ಸಂಘಟನೆ, ಹೋರಾಟದಿಂದ ಎಲ್ಲಿಯೂ ಸ್ವಾಭಿಮಾನ ಕಳೆದುಕೊಳ್ಳದೆ ಅಕ್ಷರ ಜ್ಞಾನದ ಮೂಲಕ ಸಂಘಟಿತರಾಗಿ ಹೊಸ ಬದುಕಿನ ಕಡೆಗೆ ಹೆಜ್ಜೆಗಳನ್ನಾಕುತ್ತಿರುವ ದಲಿತರ ಭರವಸೆಯ ಬದುಕುಗಳ ಸಂಕಥನವನ್ನು ಪಡಿಮೂಡಿಸಿದ್ದಾರೆ.

**ಕೊನೆ ಟಿಪ್ಪಣಿ**

1. ಶೋಬಾ ಹರಿಜನ–ನಾನು ಕಂಡ ಕನಸು, ದಲಿತ ಸಾಹಿತ್ಯ ಪರಿಷತ್ತು, ಗದಗ, 2015, ಪುಟ–03.
2. ಜಯದೇವಿ ಗಾಯಕವಾಡ–ಮತ್ತೊಂದು ಗಜಲ್, ಧರಿನಾಡು ಕನ್ನಡ ಸಂಘ, ಹುಮನನಾಬಾದೆ, 2009, ಪುಟ–63.
3. ಶೋಬಾ ಹರಿಜನ–ನಾನು ಕಂಡ ಕನಸು, ದಲಿತ ಸಾಹಿತ್ಯ ಪರಿಷತ್ತು, ಗದಗ, 2015, ಪುಟ–34.
4. ಜಯದೇವಿ ಗಾಯಕವಾಡ–ಮರುಭೂಮಿ ಮಾಡದಿರಿ, ಕರುನಾಡು ಪ್ರಕಾಶನ, 2013, ಪುಟ–14.
5. ಅದೇ–19.
6. ಎನ್. ಡಿ. ವೆಂಕಟಮ್ಮ–ಬಯಲೇ ಸಂಗಾತಿ, ಶಂಭೂಕ ಪ್ರಕಾಶನ, ಬಳ್ಳಾರಿ, 2004, ಪುಟ–16.
7. ಜಯದೇವಿ ಗಾಯಕವಾಡ–ಮತ್ತೊಂದು ಗಜಲ್, ಧರಿನಾಡು ಕನ್ನಡ ಸಂಘ, ಹುಮನನಾಬಾದೆ, 2009, ಪುಟ– 31.
8. ಅನಸೂಯ ಕಾಂಬಳೆ ಮತ್ಸ್ಯಗಂಧಿಯ ಹಾಡು, ಗುಲಾಬಿ ಪ್ರಕಾಶನ, ಪುಟ–82.
9. ಜಯದೇವಿ ಗಾಯಕವಾಡ–ಪ್ರಜ್ಞೆ–ಶೀಲ–ಕರುಣೆ, ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲೀಷರ್ಸ್, ಬೆಂಗಳೂರು, 2014, ಗಜಲ್–30.
10. ಸುಜಾತ ಚಲವಾದಿ–ಕೊರಗು, ದಲಿತ ಸಾಹಿತ್ಯ ಪರಿಷತ್ತು, ಗದಗ, 2015, ಪುಟ–20.
11. ಅದೇ–22.
12. ಅದೇ–25.
13. ಎನ್. ಡಿ. ವೆಂಕಟಮ್ಮ–ಯಾರು ಸಾಕ್ಷಿ?, ಶಂಭೂಕ ಪ್ರಕಾಶನ, ಬಳ್ಳಾರಿ, 2016, ಪುಟ–115.
14. ಮಲ್ಲಮ್ಮ ಯಾಟಗಲ್–ಕೆಂಪು ನಕ್ಷತ್ರಗಳ ಕೆಳಗೆ, ಚಾರುಮತಿ ಪ್ರಕಾಶನ, ಬೆಂಗಳೂರು, 2018, ಪುಟ–13.
15. ಅದೇ–ಪುಟ–13.

**ಪರಾಮರ್ಶನ ಗ್ರಂಥಗಳು**


1. ರಾಮಲಿಂಗಪ್ಪ ಟಿ. ಬೇಗೂರು–ನುಡಿಯಾಟ, ಸಪ್ನ ಬುಕ್ ಹೌಸ್, ಬೆಂಗಳೂರು, 2017.
2. ರಾಮಲಿಂಗಪ್ಪ ಟಿ. ಬೇಗೂರು–ಮಹಿಳೆ: ಚರಿತ್ರೆ ಮತ್ತು ಪುರಾಣ, ಅಂಕಿತ ಪುಸ್ತಕ, ಬೆಂಗಳೂರು, 2014.
3. ವೀರಣ್ಣ ಸಿ.–ಕನ್ನಡ ಕಾವ್ಯ ಕಂಡ ಹೆಣ್ಣು, ಕಾವ್ಯ ಕಲಾ ಪ್ರಕಾಶನ, ಬೆಂಗಳೂರು, 1999.
4. ಶಿವರುದ್ರಪ್ಪ ಜಿ.ಎಸ್.–ಮಹಿಳೆ ಮತ್ತು ಕನ್ನಡ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
5. ಶ್ರೀಮತಿ ಹೆಚ್.ಎಸ್.–ಮಹಿಳಾ ಸಾಹಿತ್ಯ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
6. ಶ್ರೀಮತಿ ಹೆಚ್.ಎಸ್.–ಸ್ತ್ರೀವಾದ ಅನ್ವಯಿಕತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
7. ಡಾ. ಕೆ. ಷರೀಫಾ–ಮಹಿಳೆ, ಚಳುವಳಿ ಮತ್ತು ರಾಜಕಾರಣ, ಸಿರಿವರ ಪ್ರಕಾಶನ, ಬೆಂಗಳೂರು.
8. ಡಾ. ಸಬೀಹ ಭೂಮಿಗೌಡ & ಡಾ. ಮಲ್ಲಿಕಾ ಘಂಟಿ (ಸಂ)–ಕನ್ನಡ ಸಾಹಿತ್ಯ ಮತ್ತು ಮಹಿಳೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 2006.
9. ಸಬೀಹಾ ಭೂಮಿಗೌಡ(ಸಂ)–ಮಹಿಳಾ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
10. ಸುರೇಶ ನಾಗಲಮಡಿಕೆ – ಹಲವು ಬಣ್ಣದ ಹಗ್ಗ, ದೀಪಂಕರ ಪ್ರಕಾಶನ, 2018.
11. ಡಾ. ಎಫ್.ಟಿ. ಹಳ್ಳಿ ಕೇರಿ & ಡಾ. ಕೆ. ರವೀಂದ್ರನಾಥ (ಸಂ) – ದಶಕದ ಕನ್ನಡ ಸಾಹಿತ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2002.